**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 1274/2018**

**ಪ್ರಾಸಾಃ- 8 ಚಾಸಾಃ- 22**

| | | |
|---|---|---|
| ಸಾಕ್ಷಿಯ ಹೆಸರು | : | ಅನಿಲ್ ಕುಮಾರ್ |
| ತಂದೆಯ ಹೆಸರು | : | ಪಿ.ಜೋಸೆಫ್ |
| ವಯಸ್ಸು | : | 45 ವರ್ಷ |
| ವೃತ್ತಿ | : | ಎಲೆಕ್ಟ್ರಿಷನ್ ಕೆಲಸ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 24.9.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ದಿಃ 19-1-2018 ರಂದು ನನ್ನನ್ನು ಮತ್ತು ಚಾಸಾ 23 ಈತನನ್ನು ಡಿ ವೈ ಎಸ್ ಪಿ ರವರು ಸಿ ಇ ಎನ್ ಸಿ ಪೋಲೀಸ್ ಠಾಣೆಯ ಆವರಣದಲ್ಲಿ ಪಂಚರೆಂದು ಕರೆದಿದ್ದರು. ಅಲ್ಲಿ ಚಾಸಾ 1 ಹಾಜರು ಇದ್ದನು. ಸದರಿ ಸ್ಥಳದಲ್ಲಿ ಜಾಗೃತಿ ಕಿರಣ ಪತ್ರಿಕೆ ಬಿದ್ದಿತ್ತು ಎಂದು ಚಾಸಾ 1 ತೋರಿಸಿದ್ದ ಮತ್ತು ಸದರಿ ಪತ್ರಿಕೆಯನ್ನು ಸಹ ತೋರಿಸಿದ್ದ. ಪೋಲೀಸರು ಸದರಿ ಪತ್ರಿಕೆಯನ್ನು ನಮ್ಮ ಸಮಕ್ಷಮ ಸಂಜೆ 6-30 ರಿಂದ 7-30 ರವರೆಗೆ ಪಂಚನಾಮೆಯನ್ನು ಮಾಡಿ ಜಪ್ತು ಮಾಡಿಕೊಂಡಿದ್ದರು. ಸದರಿ ಪಂಚನಾಮೆ ನಿಪಿ-3 ಆಗಿದೆ. ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ಎರಡು ಪೋಟೋಗಳನ್ನು ತೆಗೆದಿದ್ದರು. ಸದರಿ ಪೋಟೋಗಳನ್ನು ನಿಪಿ-5 ಮತ್ತು 6 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ ಎಂ ಜಿ ವಕೀಲರಿಂದಃ**

ನಾನು 10 ನೇ ತರಗತಿವರೆಗೆ ಓದಿದ್ದೇನೆ. ನನಗೆ ಚಾಸಾ 1 ರವರ ಪರಿಚಯ 7-8 ವರ್ಷದಿಂದ ಇದೆ. ನನಗೆ ಪಂಚನಾಮೆ ಮಾಡಲು ಡಿ ವೈ ಎಸ್ ಪಿ ರವರು ಕರೆದಿದ್ದರು. ನನಗೆ ಪಂಚನಾಮೆಗೆ ಬರುವಂತೆ ಲಿಖಿತವಾಗಿ ನೋಟೀಸ್ ಕೊಟ್ಟಿದ್ದರು. ಎಸ್ ಪಿ ಕಚೇರಿಯ ಒಳಗೆ ಸಿ ಇ ಎನ್ ಪೋಲೀಸ್ ಠಾಣೆ ಆವರಣವದಲ್ಲಿ

ಪಂಚನಾಮೆ ಮಾಡಿದ್ದರು. ನನಗೆ ಸದರಿ ಸ್ಥಳದ ಚೆಕ್ಕು ಬಂದಿ ಹೇಳಲು ಬರುವುದಿಲ್ಲ. ನಾನು, ಚಾಸಾ 23, ಡಿ ವೈ ಎಸ್ ಪಿ ಮತ್ತು ಚಾಸಾ 1 ಪಂಚನಾಮೆ ಸಮಯದಲ್ಲಿ ಇದ್ದೆವು. ಪಂಚನಾಮೆಯನ್ನು ರೈಟರ್ ಬರೆದಿದ್ದರು. ಅವರ ಹೆಸರು ಗೊತ್ತಿಲ್ಲ. ಪಂಚನಾಮೆಯನ್ನು ಬರೆದ ನಂತರ ಅದನ್ನು ನನಗೆ ಓದಿ ಹೇಳಿಲ್ಲ. ಪಂಚನಾಮೆಗೆ ನಾನು ಸೆನ್ ಪೋಲೀಸ್ ಠಾಣೆಯಲ್ಲಿಯೇ ಮಾಡಿದ್ದೆ. ನನಗೆ ಪತ್ರಿಕೆಯಲ್ಲಿ ಯಾವ ದಿವಸ ಚಾಸಾ 1 ರವರ ಬಗ್ಗೆ ವರದಿ ಪ್ರಕಟ ಆಗಿತ್ತು  ಎಂದು ಗೊತ್ತಿಲ್ಲ. ಪಂಚನಾಮೆಯಲ್ಲಿ ಏನು ಬರೆದಿದೆ ಎಂಬುದನ್ನು ನಾನೂ ಸಹ ಓದಿಲ್ಲ. ಪತ್ರಿಕೆಯನ್ನು ನನ್ನ ಸಮಕ್ಷಮದಲ್ಲಿಯೇ ಜಪ್ತು ಮಾಡಿಕೊಂಡಿದ್ದರು. ನನ್ನ ಸಮಕ್ಷಮ ಯಾವುದೆ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ಪತ್ರಿಕೆಯನ್ನು ಜಪ್ತು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ 1 ನನಗೆ ಪರಿಚಯ ಇರುವುದರಿಂದ ನಾನು ಅವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>**

**<u>ವಿಶೇಷ ಮೊಕದ್ದಮೆ ಸಂಖ್ಯೆ:- 1274/2018</u>**

**ಪ್ರಾಸಾಃ- 9 ಚಾಸಾಃ- 23**

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀನಿವಾಸ |
| ತಂದೆಯ ಹೆಸರು | : | ಆಂಜನೇಯ |
| ವಯಸ್ಸು | : | 57 ವರ್ಷ |
| ವೃತ್ತಿ | : | ಎಲೆಕ್ಟ್ರಿಷನ್ ಕೆಲಸ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 24.9.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ದಿಃ 19-1-2018 ರಂದು ನನ್ನನ್ನು ಮತ್ತು ಚಾಸಾ 22 ಈತನನ್ನು ಡಿ ವೈ ಎಸ್ ಪಿ ರವರು ಸಿ ಇ ಎನ್ ಸಿ ಪೋಲೀಸ್ ಠಾಣೆಯ ಆವರಣದಲ್ಲಿ ಪಂಚರೆಂದು ಕರೆದಿದ್ದರು. ಅಲ್ಲಿ ಚಾಸಾ 1 ಹಾಜರು ಇದ್ದನು. ಸದರಿ ಸ್ಥಳದಲ್ಲಿ ಜಾಗೃತಿ ಕಿರಣ ಪತ್ರಿಕೆ ಬಿದ್ದಿತ್ತು ಎಂದು ಚಾಸಾ 1 ತೋರಿಸಿದ್ದ ಮತ್ತು ಸದರಿ ಪತ್ರಿಕೆಯನ್ನು ಸಹ ತೋರಿಸಿದ್ದ. ಪೋಲೀಸರು ಸದರಿ ಪತ್ರಿಕೆಯನ್ನು ನಮ್ಮ ಸಮಕ್ಷಮ ಸಂಜೆ 6-30 ರಿಂದ 7-30 ರವರೆಗೆ ಪಂಚನಾಮೆಯನ್ನು ಮಾಡಿ ಜಪ್ತು ಮಾಡಿಕೊಂಡಿದ್ದರು. ಸದರಿ ಪಂಚನಾಮೆ ನಿಪಿ-3 ಆಗಿದೆ. ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ನಾನು ಈಗ ನೋಡುತ್ತಿರುವ ನಿಪಿ-5 ಮತ್ತು 6 ಎರಡು ಪೋಟೋಗಳನ್ನು ತೆಗೆಯಲಾಗಿತ್ತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ ಎಂ ಜಿ ವಕೀಲರಿಂದಃ</u>**

ನಾನು 10 ನೇ ತರಗತಿವರೆಗೆ ಓದಿದ್ದೇನೆ. ನನಗೆ ಚಾಸಾ 1 ರವರ ಪರಿಚಯ 7-8 ವರ್ಷದಿಂದ ಇದೆ. ನನಗೆ ಪಂಚನಾಮೆ ಮಾಡಲು ಡಿ ವೈ ಎಸ್ ಪಿ ರವರು ಕರೆದಿದ್ದರು. ನನಗೆ ಪಂಚನಾಮೆಗೆ ಬರುವಂತೆ ಲಿಖಿತವಾಗಿ ನೋಟೀಸ್ ಕೊಟ್ಟಿದ್ದರು. ಎಸ್ ಪಿ ಕಚೇರಿಯ ಒಳಗೆ ಸಿ ಇ ಎನ್ ಪೋಲೀಸ್ ಠಾಣೆ ಆವರಣದಲ್ಲಿ

ಪಂಚನಾಮೆ ಮಾಡಿದ್ದರು. ನನಗೆ ಸದರಿ ಸ್ಥಳದ ಚೆಕ್ಕು ಬಂದಿ ಹೇಳಲು ಬರುವುದಿಲ್ಲ. ನಾನು, ಚಾಸಾ 23, ಡಿ ವೈ ಎಸ್ ಪಿ ಮತ್ತು ಚಾಸಾ 1 ಪಂಚನಾಮೆ ಸಮಯದಲ್ಲಿ ಇದ್ದೆವು. ಪಂಚನಾಮೆಯನ್ನು ರೈಟರ್ ಬರೆದಿದ್ದರು. ಅವರ ಹೆಸರು ಗೊತ್ತಿಲ್ಲ. ಪಂಚನಾಮೆಯನ್ನು ಬರೆದ ನಂತರ ಅದನ್ನು ನನಗೆ ಓದಿ ಹೇಳಿಲ್ಲ. ಪಂಚನಾಮೆಗೆ ನಾನು ಸೆನ್ ಪೋಲೀಸ್ ಠಾಣೆಯಲ್ಲಿಯೇ ಮಾಡಿದ್ದೆ. ನನಗೆ ಪತ್ರಿಕೆಯಲ್ಲಿ ಯಾವ ದಿವಸ ಚಾಸಾ 1 ರವರ ಬಗ್ಗೆ ವರದಿ ಪ್ರಕಟ ಆಗಿತ್ತು ಎಂದು ಗೊತ್ತಿಲ್ಲ. ಪಂಚನಾಮೆಯಲ್ಲಿ ಏನು ಬರೆದಿದೆ ಎಂಬುದನ್ನು ನಾನೂ ಸಹ ಓದಿದ್ದೇನೆ. ಪತ್ರಿಕೆಯನ್ನು ನನ್ನ ಸಮಕ್ಷಮದಲ್ಲಿಯೇ ಜಪ್ತು ಮಾಡಿಕೊಂಡಿದ್ದರು. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ಪತ್ರಿಕೆಯನ್ನು ಜಪ್ತು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ 1 ನನಗೆ ಪರಿಚಯ ಇರುವುದರಿಂದ ನಾನು ಅವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**